ವಿಷಯ ಬಿಲ್ಲು ಪಾವತಿ ಕುರಿತು ಬಗ್ಗೆ

ಪುಟದ ಸಂಖ್ಯೆ 1

ಕಡತದ ಸಂಖ್ಯೆ ಕಾ.ಖಾ.ಕ/ಯಲಂಕ/ಪ್ರ.ವಿ/ 15)/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಸೂಚನೆ ಮೇರೆಗೆ ಈ ಕೆಳಕಂಡ ಕಾಮಗಾರಿಗಳ ಬಿಲ್ಲನ್ನು ಪಾವತಿಸುವ ಬಗ್ಗೆ.

*****

01) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಸಂ–004ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಪೂರೈಸಿದ್ದು, ಗುತ್ತಿಗೆದಾರರಾದ ಷಡಿಯನ್ ರವರು ಸದರಿ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಪೂರ್ಣಗೊಳಿಸಲು ಬ್ಯಾಂಕ್ ಮತ್ತು ವೈಯಕ್ತಿಕವಾಗಿ ಸಾಲ ಮಾಡಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತೇನೆ. (ಬ್ಯಾಂಕ್ ನೋಟಿಸ್ ಪ್ರತಿಯನ್ನು ಲಗತ್ತಿಸಿದೆ.) ಆದ್ದರಿಂದ ಗುತ್ತಿಗೆದಾರರು ತುಂಬಾ ಆರ್ಥಿಕ ಸಂಕಷ್ಟದಲ್ಲಿ ಬಳಲುತಿರುವುದರಿಂದ ತುರ್ತಾಗಿ ತಮ್ಮ ಮಗಳ ಮದುವೆ ಕಾರ್ಯಕ್ಕಾಗಿ ಹಣ ಬಿಡುಗಡೆ ಮಾಡಲು ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರಿಗೆ ಮನವಿ ಪತ್ರ ಸಲ್ಲಿಸರುತ್ತಾರೆ.

02 ಅದರಂತೆ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರು ಕ್ರಮ ವಹಿಸುವಂತೆ ಮುಖ್ಯ ಲೆಕ್ಕಾಧಿಕಾರಿಗಳು ರವರಿಗೆ ಸೂಚಿಸಿರುತ್ತಾರೆ. ಅದರಂತೆ ಶ್ರೀ.ಷಡಿಯನ್ ರವರ ಮಗಳ ಮದುವೆ ಕಾರ್ಯಕ್ರಮ ದಿ:19–08–2019ರಂದು ಹಮ್ಮಿಕೊಂಡಿರುವುದರಿಂದ ಹಣದ ಅವಶ್ಯಕ್ಕೆ ತುಂಬಾ ಇರುತ್ತದೆ. ಆದ್ದರಿಂದ ಈ ಕೆಳಕಂಡ ಕಾಮಗಾರಿಯ ಬಾಕಿ ಬಿಲ್ಲುಗಳ ಮೊತ್ತವನ್ನು Commissioner Category ಯಲ್ಲಿ ಜರೂರಾಗಿ ಪಾವತಿಸಲು ಕೋರಿ ಕಡತವನ್ನು ಮಂಡಿಸಿದೆ.

Sl. No	Job No	Contractor Name	Name of the work	Br /Cbr	Gross Amt
03 1	004-17-000065	Shadian	Providing chainlink fencing to Parks at Judicial Layout in ward No. 04	35/29-06-2019	11176837

23/7/19

ಕಾರ್ಯಪಾಲಕ ಅಭಿಯಂತರರು (ಯೋಜನೆ)

Executive Engineer
Project Division
Yelahanka Zone
BBMP, Bangalore-92

04) ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ CAO

ಮುಖ್ಯ ಲೆಕ್ಕಾಧಿಕಾರಿಗಳ ಕಾನೂನು ಪಾಲಕರ ಕಛೇರಿ
ಟಪಾಲು ಸಂಖ್ಯೆ 1708
ದಿನಾಂಕ 23/7/19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
5	ಕಂಡಿಕೆ (1) ರಿಂದ (3)ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆದಾರರ ಮಗಳ ಮದುವೆ ಕಾರ್ಯಕ್ರಮ ದಿನಾಂಕ:19–08–2019ರಂದು ಹಮ್ಮಿಕೊಂಡಿದ್ದು, ಹಣದ ಅವಶ್ಯಕತೆ ತುಂಬಾ ಇರುತ್ತದೆ. ಆದ್ದರಿಂದ 004–17–000065 ಕಾಮಗಾರಿ ಬಾಕಿ ಬಿಲ್ಲುಗಳ ಮೊತ್ತವನ್ನು Commissioner Category ಯಲ್ಲಿ ಜರೂರಾಗಿ ಪಾವತಿಸಲು ಕಾ.ಪಾ.ಅ. ಯೋಜನೆ–ಯಲಹಂಕರವರು ಕೋರಿರುತ್ತಾರೆ.
6	ಸದರಿ ಜಾಬ್ ಸಂಖ್ಯೆಯನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಲಾಗಿ, Curr Gen. Seniority ಗೆ ಸಂಬಂಧಿಸಿದ್ದು, ಸದರಿ ಬಿಲ್ಲಿನ ಬಿ.ಆರ್. ದಿನಾಂಕ:29–06–2019 ಆಗಿರುತ್ತದೆ. ಪ್ರಸ್ತುತ ಸದರಿ ಕ್ಯಾಟಗರಿಯಲ್ಲಿ ಸಂ:ಮುಲೆಅ/ಪಿಆರ್/4415/17–18, ದಿನಾಂಕ:05–05–2016ರಂತೆ ಫೆಬ್ರವರಿ–2018ರ ಮಾಹೆಯ ಬಿಲ್ಲುಗಳನ್ನು ಪಾವತಿಸಲಾಗುತ್ತಿರುತ್ತದೆ.
7	ಮುಂದುವರೆದು, ಕಂಡಿಕೆ (1) ರಿಂದ (3)ರ ವರದಿಯಂತೆ, ಮಾನ್ಯ ಆಯುಕ್ತರ ಕಛೇರಿ ಆದೇಶ ಸಂ:ಮುಲೆಅ/ಪಿಆರ್/4415/17–18, ದಿನಾಂಕ:20–03–2018ರಂತೆ "Commissioner Order Category" ಅಡಿಯಲ್ಲಿ ಗುತ್ತಿಗೆದಾರರ/ಮಕ್ಕಳ ವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತು ಗುತ್ತಿಗೆದಾರರು ಮತ್ತು ಅವರ ಅವಲಂಬಿತರ ಅನಾರೋಗ್ಯದ ಪ್ರಕರಣಗಳನ್ನು ಮಾತ್ರ ಪರಿಗಣಿಸಲು ಆದೇಶಿಸಲಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಮುಂದಿನ ಆದೇಶ ಕೋರಿ ಕಡತ ಸಲ್ಲಿಸಿದೆ.
8	ಕಂಡಿಕೆ (1)ರಲ್ಲಿ "ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) ರವರ ವರದಿಗಳನ್ನು ಪರಿಶೀಲಿಸಿ ಮಾನ್ಯ ಆಯುಕ್ತರ ಕಛೇರಿ ಆದೇಶ ಸಂ: ಮುಲೆಅ/ಪಿಆರ್/4415/17–18, ದಿನಾಂಕ: 20.03.2018ರಂತೆ "Commissioner Order Category" ಅಡಿಯಲ್ಲಿ ಈ ಕೆಳಕಂಡ ಪ್ರಕರಣಗಳು ಮಾತ್ರ, • ಗುತ್ತಿಗೆದಾರರ / ಮಕ್ಕಳ ವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾ.ಪಾ.ಅ ರವರು ಗುತ್ತಿಗೆದಾರರು ಲಗತ್ತಿಸಿರುವ ಆಹ್ವಾನ ಪತ್ರಿಕೆಯಲ್ಲಿ ತಿಳಿಸಿರುವ ಸ್ಥಳ (ಕಲ್ಯಾಣ ಮಂಟಪ/ಶಾದಿ ಮಹಲ್/ಪಾರ್ಟಿ ಹಾಲ್. . .ಇತ್ಯಾದಿ)ವನ್ನು ಸದರಿ ದಿನಾಂಕದಂದೇ ಕಾದಿರಿಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲನಾ ವರದಿಯೊಂದಿಗೆ ದೃಢೀಕರಿಸಿದ ಪ್ರಕರಣಗಳು. • ಗುತ್ತಿಗೆದಾರರು ಮತ್ತು ಅವರ ಅವಲಂಬಿತರ ಅನಾರೋಗ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರ ಅವಲಂಬಿತರ ಅನಾರೋಗ್ಯಕ್ಕೆ ಸಂಬಂಧಿಸಿದ • ಬಿಲ್ಲುಗಳನ್ನು ವಲಯ ಆರೋಗ್ಯ ಪೈದ್ಯಾಧಿಕಾರಿಗಳಿಂದ ದೃಢೀಕರಿಸಿದ ಪ್ರಕರಣಗಳನ್ನು ಮಾತ್ರ ಪರಿಗಣಿಸಲು ಆದೇಶಿಸಲಾಗಿರುತ್ತದೆ.
9	ಸದರಿಯವರು ನಿರ್ವಹಿಸಿರುವ ಕಾಮಗಾರಿಯ ಬಿಲ್ಲನ್ನು "Commissioner Order Category" ಅಡಿಯಲ್ಲಿ ಪಾವತಿಸಲು ಕಂಡಿಕೆ 1 ರಿಂದ 3 ರಲ್ಲಿ ಕಾರ್ಯಪಾಲಕ ಅಭಿಯಂತರರು (ಯಲಹಂಕ–ಯೋಜನೆ) ಸದರಿ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರ ಮಗಳ ಮದುವೆ ಇರುವ ಸಂಬಂಧ ಕೆ.ಎನ್.ಎಸ್ ಕನ್ವೆನ್ಷನ್ ಸೆಂಟರ್ ಅನ್ನು ದಿ: 01.07.2019 ರಂದು ಕಾಯ್ದಿರಿಸಿರುವ ಬಗ್ಗೆ "Cash Receipt" ಹಾಗೂ ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆಯನ್ನು ಲಗತ್ತಿಸಿರುತ್ತಾರೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಸೂಕ್ತ ನಿರ್ದೇಶನ ಕೋರಿ ಕಡತ ಸಲ್ಲಿಸಿದೆ. ಕಂಡಿಕೆ (8) ಆಕ್ಷೇಪಣೆಯಿಲ್ಲದ ಕಾರಣ ತಮ್ಮ ಅವಗಾಹನೆಗೆ ತರುತ್ತಿದ್ದೇನೆ. For kind orders. ಮುಖ್ಯ ಲೆಕ್ಕಾಧಿಕಾರಿಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು
10	CA-I

ಟಿಪ್ಪಣಿ ಹಾಳೆ

ವಿಷಯ Commissioner Order Category Bill Payment - reg. ಪುಟದ ಸಂಖ್ಯೆ 3

ಕಡತದ ಸಂಖ್ಯೆ SC(P)/3181/19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
11	Spl. Commissioner ಗಮನಕ್ಕೆ
	ವಿ.ಯೋ/ಪಿ.ಆರ್/3181/2019-2020
12	ಕಾರ್ಯಪಾಲಕ ಅಭಿಯಂತರರು (ಯೋಜನೆ-ಯಲಹಂಕ ವಿಭಾಗ) ರವರು ವರದಿ ಮಂಡಿಸಿ, ವಾರ್ಡ್ ಸಂಖ್ಯೆ:04 ರ ವ್ಯಾಪ್ತಿಯಲ್ಲಿ Providing Chainlink fencing to Parks at Judicial Layout in Ward No.04 ರ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ ಷಡಿಯನ್ ರವರು ಪೂರೈಸಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಬ್ಯಾಂಕ್ ಮತ್ತು ವೈಯಕ್ತಿಕವಾಗಿ ಸಾಲ ಮಾಡಿಕೊಂಡಿರುವುದಾಗೂ ಸದರಿಯವರು ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಮತ್ತು ಗುತ್ತಿಗೆದಾರರ ಮಗಳ ಮದುವೆಯು ದಿನಾಂಕ:18-08-2019 ಮತ್ತು 19-08-2019 ರಂದು **"ಶ್ರೀ ಕೆ.ಎನ್.ಎಸ್.ಕನ್ವೆಷನ್ ಹಾಲ್, ಬೆಂಗಳೂರು"** ಇಲ್ಲಿ ನೇರವೇರಲಿದ್ದು ಮದುವೆಯ ಆಮಂತ್ರಣ ಪತ್ರಿಕೆ ಹಾಗೂ ಸದರಿಯವರ ಮದುವೆಗೆ ಕಲ್ಯಾಣ ಮಂಟಪವನ್ನು ಕಾಯ್ದಿರಿಸಿರುವ ಬಗ್ಗೆ ದೃಢೀಕರಿಸಿ, ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ: ಮುಲೆಅ/ಪಿಆರ್/4415/17-18, ದಿನಾಂಕ:20-03-2018 ರನ್ವಯ ಪ್ರಸ್ತಾಪಿತ ಕಾಮಗಾರಿಗಳ ಬಿಲ್ಲಿನ ಮೊತ್ತವನ್ನು "Commissioner Order Category" ರಡಿ ಪಾವತಿಸಲು ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.
12	ಮುಂದುವರೆದು, ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ: ಮುಲೆಅ/ಪಿಆರ್/4415/17-18, ದಿನಾಂಕ:20-03-2018 ರನ್ವಯ "Commissioner Order Category" ಅಡಿಯಲ್ಲಿ "ಗುತ್ತಿಗೆದಾರರ/ಮಕ್ಕಳ ವಿವಾಹ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾ.ಪಾ.ಅ. ರವರು ಗುತ್ತಿಗೆದಾರರು ಲಗತ್ತಿಸಿರುವ ಆಹ್ವಾನ ಪತ್ರಿಕೆಯಲ್ಲಿ ತಿಳಿಸಿರುವ ಸ್ಥಳ (ಕಲ್ಯಾಣ ಮಂಟಪ/ಶಾದಿ ಮಹಲ್ ಪಾರ್ಟಿ ಹಾಲ್ . . . ಇತ್ಯಾದಿ) ವನ್ನು ಸದರಿ ದಿನಾಂಕದಂದೇ ಕಾದಿರಿಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲನಾ ವರದಿಯೊಂದಿಗೆ ದೃಢೀಕರಿಸಿದ ಪ್ರಕರಣಗಳು" ಮಾತ್ರ ಪರಿಗಣಿಸಲು ಸೂಚಿಸಲಾಗಿರುತ್ತದೆ.
13	ಮೇಲ್ಕಂಡ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, Providing Chainlink fencing to Parks at Judicial Layout in Ward No.04 ರ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ ಷಡಿಯನ್ ರವರು ಕೈಗೊಂಡಿದ್ದು, ಆಯುಕ್ತರ ಕಛೇರಿ **ಸುತ್ತೋಲೆ ಸಂಖ್ಯೆ: ಮುಲೆಅ/ಪಿಆರ್/4415/17-18, ದಿನಾಂಕ:20-03-2018 ರನ್ವಯ "Commissioner Order Category" ರಡಿ ಗುತ್ತಿಗೆದಾರರ ಬ್ಯಾಂಕ್ ಸಾಲ ಹಾಗೂ ಆರ್ಥಿಕ ಸಂಕಷ್ಟದ ಪ್ರಸ್ತಾವನೆಗಳನ್ನು ಪರಿಗಣಿಸಲು ಅವಕಾಶಗಳಿರುವುದಿಲ್ಲವೆಂಬ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ.**
14	ಮುಂದುವರೆದು, Providing Chainlink fencing to Parks at Judicial Layout in Ward No.04 ರ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ ಷಡಿಯನ್ ರವರ ಮಗಳ **ಮದುವೆಯ ವಿವಾಹ ಪತ್ರಿಕೆಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ಮದುವೆಗಾಗಿ ಕಲ್ಯಾಣ ಮಂಟಪವನ್ನು ಕಾಯ್ದಿರಿಸಿರುವುದಾಗಿ ಕಾರ್ಯಪಾಲಕ ಅಭಿಯಂತರರು (ಯಲಹಂಕ-ಯೋಜನೆ ವಿಭಾಗ) ರವರು ದೃಢೀಕರಿಸಿರುವುದರಿಂದ, ಮೇಲ್ಕಂಡ ಸುತ್ತೋಲೆಯನ್ವಯ ಪ್ರಸ್ತಾಪಿತ ಕಾಮಗಾರಿಯ ಬಿಲ್ಲಿನ ಪೈಕಿ ಗರಿಷ್ಠ ರೂ.25.00 ಲಕ್ಷಗಳನ್ನು ಹಿಂದಿನ ಯಾವುದೇ ಬಿಲ್ಲುಗಳಲ್ಲಿ ಪಾವತಿಸಿರುವುದಿಲ್ಲವೆಂಬ ಧೃಢಪಡಿಸಿಕೊಳ್ಳುವ ಷರತ್ತಿಗೊಳಪಟ್ಟು "Commissioner Order Category" ರಡಿ ಪಾವತಿಸಲು ಆದೇಶ ಕೋರಿ ಕಡತ ಮಂಡಿಸಿದೆ.**
15	ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯದರ್ಶಿ ಸಂಖ್ಯೆ ಪಿ.ಎಸ್ (4) 1920 01-08-19 ದಿನಾಂಕ..... 31.7 ಮಾನ್ಯ ಆಯುಕ್ತರು) Commissioner Bruhat Bengaluru Mahanagara Palike

ಪು.ತಿ.ನೋ

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (15)ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುವ ಮೇರಿಗೆ ಜೆಡ್ ಸಿಬಿಎಂ-004-17-000065 ರ Providing chainlink fencing to Parks at Judicial Layout in ward No. 04 ಕಾಮಗಾರಿಯನ್ನು ನಿರ್ವಹಿಸಿದ ಗುತ್ತಗೆದಾರರಿಗೆ ಈ ಹಿಂದಿನ ಯಾವುದೇ ಬಿಲ್ಲುಗಳಲ್ಲಿ ಹಣವಿಸಿರುವುದಿಲ್ಲವೆಂದು ದೃಢೀಕರಿಸಿದೆ.

16) K K P Gowdaka

Asst. Executive Engineer
Project Division
Yelahanka Zone
Bangalore

17) CAO)

1961
13/8/19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

Note No. #1

IMG_0001.pdf

17/08/2019 12:16 PM

PUNITH KUMAR R.V.
(SECOND DIVISION ASSISTANT)

18

Note No. #2

- ಕಂಡಿಕೆ (1) ರಿಂದ (16)ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ (14)ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು "ಗುತ್ತಿಗೆದಾರರ ಮಗಳ ಮದುವೆಯ ವಿವಾಹ ಪತ್ರಿಕೆಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ಮದುವೆಗಾಗಿ ಕಲ್ಯಾಣ ಮಂಟಪವನ್ನು ಕಾಯ್ದಿರಿಸಿರುವುದಾಗಿ ಕಾ.ಪಾ.ಅ. (ಯಲಹಂಕ-ಯೋಜನೆ)ರವರು ದೃಢೀಕರಿಸಿರುವುದರಿಂದ ಸುತ್ತೋಲೆಯನ್ವಯ ಪ್ರಸ್ತಾಪಿತ ಕಾಮಗಾರಿಯ ಬಿಲ್ಲಿನ ಪೈಕಿ ಗರಿಷ್ಠ ರೂ.25.00 ಲಕ್ಷಗಳನ್ನು ಹಿಂದಿನ ಯಾವುದೇ ಬಿಲ್ಲುಗಳಲ್ಲಿ ಪಾವತಿಸಿರುವುದಿಲ್ಲವೆಂಬ ದೃಢಪಡಿಸಿಕೊಳ್ಳುವ ಹಿರಿತ್ತಿಗೊಳಪಟ್ಟು "Commissioner Order Category" ಅಡಿ ಪಾವತಿಸಲು" ಮಾನ್ಯ ಆಯುಕ್ತರವರ ಆದೇಶ ಕೋರಿರುತ್ತಾರೆ.
- ಕಂಡಿಕೆ (15)ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.
- ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಜಾಬ್ ಸಂ:004-17-000065ರ BR 35/29-06-2019ರಲ್ಲಿ ಕಂಡಿಕೆ (14)ರ ಆದೇಶದಂತೆ ಪಾವತಿಸುವ ಬಗ್ಗೆ ಆದೇಶ ಕೋರಿದೆ.

19/08/2019 2:08 PM

BORAIAH
(FIRST DIVISION ASSISTANT)

Note No. #3

ಕಂಡಿಕೆ (1) ರಿಂದ (16)ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ (14)ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು "ಗುತ್ತಿಗೆದಾರರ ಮಗಳ ಮದುವೆಯ ವಿವಾಹ ಪತ್ರಿಕೆಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ಮದುವೆಗಾಗಿ ಕಲ್ಯಾಣ ಮಂಟಪವನ್ನು ಕಾಯ್ದಿರಿಸಿರುವುದಾಗಿ ಕಾ.ಪಾ.ಅ. (ಯಲಹಂಕ-ಯೋಜನೆ)ರವರು ದೃಢೀಕರಿಸಿರುವುದರಿಂದ ಸುತ್ತೋಲೆಯನ್ವಯ ಪ್ರಸ್ತಾಪಿತ ಕಾಮಗಾರಿಯ ಬಿಲ್ಲಿನ ಪೈಕಿ ಗರಿಷ್ಠ ರೂ.25.00 ಲಕ್ಷಗಳನ್ನು ಹಿಂದಿನ ಯಾವುದೇ ಬಿಲ್ಲುಗಳಲ್ಲಿ ಪಾವತಿಸಿರುವುದಿಲ್ಲವೆಂಬ ದೃಢಪಡಿಸಿಕೊಳ್ಳುವ ಹಿರಿತ್ತಿಗೊಳಪಟ್ಟು "Commissioner Order Category" ಅಡಿ ಪಾವತಿಸಲು" ಮಾನ್ಯ ಆಯುಕ್ತರವರ ಆದೇಶ ಕೋರಿರುತ್ತಾರೆ. ಕಂಡಿಕೆ (15)ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ. ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ಹಾಗೂ ಆದೇಶಕ್ಕೆ ಸಲ್ಲಿಸಿದೆ.

20/08/2019 1:05 PM

ANITHA M.
(ACCOUNTS SUPRINTEDENT)

Note No. #4

Note 3 is for perusal and approval.

ಪಂಕ್ತಿಯ ಸಂಖ್ಯೆ	File No. BBMP/CAO/ENG(PR)/217/2019-CAO (Computer No. 1919) ಟಿಪ್ಪಣಿಗಳು ಮತ್ತು ಆಜ್ಞೆಗಳು	2

20/08/2019 5:18 PM

SRINIVASALU R
(DEPUTY CONTROLLER FINANCE)

Note No. #5

- ಕಂಡಿಕೆ (14)ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರು "ಗುತ್ತಿಗೆದಾರರ ಮಗಳ ಮದುವೆಯ ವಿವಾಹ ಪತ್ರಿಕೆಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ಮದುವೆಗಾಗಿ ಕಲ್ಯಾಣ ಮಂಟಪವನ್ನು ಕಾಯ್ದಿರಿಸಿರುವುದಾಗಿ ಕಾ.ಪಾ.ಅ. (ಯಲಹಂಕ-ಯೋಜನೆ)ರವರು ದೃಢೀಕರಿಸಿರುವುದರಿಂದ ಸುತ್ತೋಲೆಯನ್ವಯ ಪ್ರಸ್ತಾಪಿತ ಕಾಮಗಾರಿಯ ಬಿಲ್ಲಿನ ಪೈಕಿ ಗರಿಷ್ಠ ರೂ.25.00 ಲಕ್ಷಗಳನ್ನು ಹಿಂದಿನ ಯಾವುದೇ ಬಿಲ್ಲುಗಳಲ್ಲಿ ಪಾವತಿಸಿರುವುದಿಲ್ಲವೆಂಬ ದೃಢಪಡಿಸಿಕೊಳ್ಳುವ ಷರತ್ತಿಗೊಳಪಟ್ಟು "Commissioner Order Category" ಅಡಿ ಪಾವತಿಸಲು" ಮಾನ್ಯ ಆಯುಕ್ತರವರ ಆದೇಶ ಕೋರಿರುತ್ತಾರೆ.
- ಕಂಡಿಕೆ (15)ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.
- ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಜಾಬ್ ಸಂ:004-17-000065 ರ BR 35/29-06-2019 ರಲ್ಲಿ ಕಂಡಿಕೆ (14)ರ ಆದೇಶದಂತೆ ಪಾವತಿಸುವ ಬಗ್ಗೆ ಆದೇಶ ಕೋರಿದೆ.

23/08/2019 3:13 PM

R GOVINDARAJU
(CHIEF ACCOUNTS OFFICER)

Note No. #6

A demand of Rs. 1,11,76,837/- is put up by Executive Engineer (Project-Yelahanka). Honble Commissioner has approved under commissioner order category in para 15 of hard file. Hence, payment of Rs. 25,00,000/- (Marriage Case) can be done.

09/09/2019 12:30 PM

DR. LOKESH
(SPECIAL COMMISSIONER)

Note No. #7

ಒಪ್ಪಿದೆ

19/10/2019 10:39 AM

ANIL KUMAR B H
(COMMISSIONER)

Digitally Signed

Note No. #8

for necessary action.

21/10/2019 10:51 AM

DR. LOKESH

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು (SPECIAL COMMISSIONER)

Note No. #9

ನೋಟ್ (7)ರಂತೆ ಕ್ರಮವಹಿಸಲು ಸೂಚಿಸಿದೆ.

21/10/2019 1:28 PM

R GOVINDARAJU
(CHIEF ACCOUNTS OFFICER)

19 ಮೂಲ ಕಡತದ ಕಂಡಿಕೆ (15) ರಲ್ಲಿ ಹಿಂದಿನ ಆಯುಕ್ತರು ಹಾಗೂ E-office 1919 Note (7) ರಲ್ಲಿ ದಿನಾಂಕ:19–10–2019ರಂದು ಮಾನ್ಯ ಆಯುಕ್ತರವರು ಅನುಮೋದಿಸಿರುವ ಮೇರೆಗೆ ಕಾ.ಪಾ.ಅ. ಯೋಜನೆ–ಯಲಹಂಕ ವಿಭಾಗದ ಜಾಬ್ ಕೋಡ್ ಸಂ: 004–17–000065 ನ್ನು Commissioner Order Category ಯಲ್ಲಿ display ಮಾಡಲು (ರೂ.25.00ಲಕ್ಷಗಳನ್ನು ಪಾವತಿಸಬೇಕಾಗಿರುವುದರಿಂದ ರೂ.81,88,136/–ಗಳನ್ನು ಎಂ.ಡಿ. ಇರಿಸಿ) ಒಪ್ಪಿದ್ದಲ್ಲಿ ಮೆ.ವಲ್ಲಭ್ ಸಾಫ್ಟ್‌ವೇರ್ ಸಲ್ಯೂಷನ್ಸ್ ರವರಿಗೆ ಸಿದ್ದಪಡಿಸಿರುವ ಪತ್ರವನ್ನು ಮುಂದಿನ ಸೂಕ್ತ ನಿರ್ದೇಶನ ಹಾಗೂ ಆದೇಶ ಕೋರಿದೆ.

20) AE) ಮುಂದಿನ ಸೂಕ್ತ ನಿರ್ದೇಶನ ನೀಡಲು ಕೋರಿದೆ.

21) DE) ಕಂಡಿಕೆ E-office 1919 Note-7 ರಲ್ಲಿ ಮಾನ್ಯ ಆಯುಕ್ತರ ಆದೇಶವನ್ನು ಅನುಷ್ಠಾನಕ್ಕೆ ತರಲಾಗಿದೆ. ಪ್ರಸ್ತುತ Commissioner Order Category ಯಲ್ಲಿ ಸೇ.ರ್ಕ್ಷ ಅನುದಾನ ಮುಕ್ತಾಯವಾಗಿರುತ್ತದೆ. ಅನುದಾನ ಲಭ್ಯತೆಯ ದೃಢೀಕರಣ ಪತ್ರವನ್ನು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಇವರಿಂದ ಪಡೆಯಲಾಗಿದೆ. ಆದೇಶ ಕೋರಿದೆ.

ದಿ: 24/10/19

22) CAO)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಲೆಕ್ಕಾಧಿಕಾರಿರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-೫೬೦ ೦೦೨

ಸಂ:ಮುಲೆಅ/ಪಿಆರ್/E-1919/2019-20 ದಿನಾಂಕ:24-10-2019

ರವರಿಗೆ,
ಮೆ॥ ವಲ್ಲಭ್ ಸಾಫ್ಟ್‌ವೇರ್ ಸಲ್ಯೂಷನ್ ಪ್ರೈ.ಲಿ.,
ನಂ.3, 6ನೇ ಕ್ರಾಸ್, 3ನೇ ಮುಖ್ಯರಸ್ತೆ, 3ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-28

ಮಾನ್ಯರೇ,

ವಿಷಯ: ಕಾ.ಪಾ.ಅ. (ಯೋ-ಯಲಹಂಕ) ವಿಭಾಗದಲ್ಲಿ ನಿರ್ವಹಿಸಿರುವ ಕಾಮಗಾರಿಯ ಬಿಲ್ಲುಗಳನ್ನು Commissioner Order Category ನಲ್ಲಿ ಪಾವತಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾ.ಪಾ.ಅ. (ಯೋ-ಯಲಹಂಕ) ವಿಭಾಗರವರು ಸಲ್ಲಿಸಿರುವ ವರದಿಗೆ ಕಂಡಿಕೆ (15)ರಲ್ಲಿ ಹಿಂದಿನ ಆಯುಕ್ತರು ಹಾಗೂ E-1919 Note (7) ರಲ್ಲಿ ಮಾನ್ಯ ಆಯುಕ್ತರು ದಿನಾಂಕ:19-10-2019ರಲ್ಲಿ ಆದೇಶಿಸಿರುವ ಮೇರೆಗೆ ಈ ಕೆಳಕಂಡ ಕಾಮಗಾರಿಯ ಬಿಲ್ಲನ್ನು ಆನ್‌ಲೈನ್‌ನಲ್ಲಿ Commissioner Orderನಲ್ಲಿ Display ಮಾಡಲು ತಿಳಿಸಿದೆ.

(ಲೆಕ್ಕಶೀರ್ಷಿಕೆ : ಪಿ-2226)

Sl No	Job Code	Work name	BR No & Date	Gross Amount	Deduction Amount	MD Amount	Net Amount
1	004-17-000065	Providing chainlink fencing to Parks at Judicial Layout in ward No. 04	35 29-06-19	11176837	488701	8188136	2500000
Total				**11176837**	**488701**	**8188136**	**2500000**

ಮುಖ್ಯ ಲೆಕ್ಕಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Received
For vallabh soft
05/11/19

ಗಣೇಶ ಇಂಜಿನಿಯರಿಂಗ್ ವರ್ಕ್ಸ್

ಬಿ.ಡಬ್ಲ್ಯು.ಎಸ್.ಎಸ್.ಬಿ., ಬಿ.ಬಿ.ಎಂ.ಪಿ., ಪಿ.ಡಬ್ಲ್ಯು.ಡಿ. ಲೈಸೆನ್ಸ್ ಪಡೆದಿರುವ ಹಾಗೂ ಸರ್ಕಾರದಿಂದ ಅಂಗೀಕೃತ ಸ್ಯಾನಿಟರಿ ನೀರು ಸರಬರಾಜು ಮತ್ತು ಪ್ಲಂಬಿಂಗ್ ಕಂಟ್ರಾಕ್ಟರ್
ನಂ. 910, ಇ.ಡಬ್ಲ್ಯು.ಎಸ್. 2ನೇ ಹಂತ,
ಯಲಹಂಕ ಉಪನಗರ, ಬೆಂಗಳೂರು–560 106
ಮೊಬೈಲ್ : 99803 26667 / 98455 83321

Ganesh Engineering Works

Govt. Licenced Sanitary, Water Supply & Plumbing Contractor &
B.W.S.S.B., B.B.M.P. & PWD Licenced Holder
No. 910, EWS 2nd Stage, Yelahanka New Town
Bangalore - 560 106
Mobile : 99803 26667 / 98455 83321

Ref. No.

Date :

ಇವರಿಗೆ
ಮಾನ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಟಪಾಲು ಸಂಖ್ಯೆ :
ದಿನಾಂಕ : 22/7/19

Commissioner
Bruhat Bengaluru Mahanagara Palike

ಮಾನ್ಯರೇ,

ವಿಷಯ: 004 ವಾರ್ಡ್‌ನಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಯ ಅನುದಾನ ಬಿಡುಗಡೆ ಮಾಡುವ ಬಗ್ಗೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಾದ ಷಡಿಯನ್ ಆದ ನಾನು ಗಣೇಶ್ ಇಂಜಿನಿಯರಿಂಗ್ ವರ್ಕ್ಸ್ ಹೆಸರಿನಲ್ಲಿ ಈ ಕೆಳಕಂಡ ಕಾಮಗಾರಿಯನ್ನು 004 ವಾರ್ಡ್‌ನಲ್ಲಿ ಪೂರ್ಣಗೊಳಿಸಿರುತ್ತೇನೆ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಪೂರ್ಣಗೊಳಿಸಲು ಬ್ಯಾಂಕ್ ಮತ್ತು ವೈಯಕ್ತಿಕವಾಗಿ ಸಾಲ ಮಾಡಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತೇನೆ. (ಬ್ಯಾಂಕ್ ನೋಟಿಸ್ ಪ್ರತಿಯನ್ನು ಲಗತ್ತಿಸಿದೆ.) ಆದ್ದರಿಂದ ನಾನು ತುಂಬಾ ಆರ್ಥಿಕ ಸಂಕಷ್ಟದಲ್ಲಿ ಬಳಲುತಿರುವುದರಿಂದ ತುರ್ತಾಗಿ ಈ ಕೆಳಕಂಡ ಕಾಮಗಾರಿಯನ್ನು Commissioner Category ಬಿಡುಗಡೆ ಮಾಡಲು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

Sl. No	Job No	Contractor Name	Name of the work	Br /Cbr	Gross Amt
1	004-17-000065	Shadian	Providing chainlink fencing to Parks at Judicial Layout in ward No. 04	35/29-06-2019	11176837

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
SHADAYAN

Pl. Put up
22/07

Deputy Controller (Finance)
Bruhat Bangalore Mahanagara Palike
Bangalore

EE (Yelahanka)

विजया बैंक VIJAYA BANK

अब - बैंक ऑफ़ बड़ौदा | NOW - BANK OF BARODA

VIJAYA BANK

YELAHANKABANGALORE

Ref:VB:003743738

Date : 12/07/2019

To:
M/s Ganesh Engineering Works
Prop: Shadian
#910,EWS 2nd Stage
Yelahanka New Town,
Bangalore-560064

Sub : Non servicing of interest in your Loan account No.138007711000011

You have been sanctioned with the captioned Working Capital limit of Rs.60,00,000/- . But it is noticed that you have not even serviced the interest for the above limit for last 2 months. Hence, you are hereby called upon to service the interest already debited Immediately and also service the interest that will be debited during this month end to avoid the account slipping to NPA.

Any Further Delay in servicing of interest will make the bank to take appropriate action to recover complete dues from you legally and the complete amount of Rs.60,00,000/- along with interest will have to be recalled.

Treat the matter as Most Urgent.

Thanking you and assuring you of our best services always.

Yours truly,

Branch Head

॥ ಶ್ರೀ ಪರಮಾತ್ಮ ತುಷ್ಟಿ ॥ ॥ ಶ್ರೀ ಮಾರುತಿ ತುಷ್ಟಿ ॥

ಶ್ರೀಮತಿ ಎನ್. ಪುಷ್ಪ ಮತ್ತು ಶ್ರೀ ಯು. ಸಪ್ತಗಿರಿಯಪ್ಪ

ನಂ. 910, 15ನೇ ಬಿ-ಕ್ರಾಸ್, ಇಪಿಡ್ಲ್ಯೂಎಸ್. 2ನೇ ಹಂತ, ಯಲಹಂಕ ಉಪನಗರ
ಬೆಂಗಳೂರು - 560 064.

ಶ್ರೀಮತಿ ಎನ್. ಮಲ್ಲಿಕ ಮತ್ತು ಶ್ರೀ ಆರ್.ವಿ. ಸುಬ್ರಮಣಿ

ವಿದ್ಯಾನಗರ ಕ್ರಾಸ್, ಬೆಂಗಳೂರು ಉತ್ತರ - 562 157.

ಇವರು ಮಾಡುವ ವಿಜ್ಞಾಪನೆಗಳು

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಗಳು 1941ಕ್ಕೆ ಸಲಿಯುವ
ಶ್ರೀ ವಿಕಾಲನಾಮ ಸಂವತ್ಸರ ಶ್ರಾವಣಮಾಸ ದಕ್ಷಿಣಾಯನೇ ಹೇಮ್ಲ ಪಕ್ಷ
ತಾ॥ 19-08-2019ನೇ ಸೋಮವಾರ ಈ ಶುಭದಿನ ಬೆಳಿಗ್ಗೆ 9-30 ರಿಂದ 10-15
ರಂಟಿಯೊಳಗೆ ಸಲ್ಲುವ ಶುಭ ಕನ್ಯಾ ಲಗ್ನದಲ್ಲಿ

ಚಿ॥ ಸೌ॥ **ಸಂಗೀತ**

(ಶ್ರೀಮತಿ ಎನ್. ಪುಷ್ಪ ಮತ್ತು ಶ್ರೀ ಯು. ಸಪ್ತಗಿರಿಯಪ್ಪ ರವರ ಪುತ್ರಿ)

ಚಿ॥ ರಾ॥ **ಮಿಲ್ಟನ್**

(ಶ್ರೀಮತಿ ಎನ್. ಮಲ್ಲಿಕ ಮತ್ತು ಶ್ರೀ ಆರ್.ವಿ. ಸುಬ್ರಮಣಿ ರವರ ಪುತ್ರ)

ತಮ್ಮ ಶುಭಾಗಮನವನ್ನು ಬಯಸುವವರು :

ಬಂಧು - ಮಿತ್ರರು

ತಾ॥ 18-08-2019ನೇ ಭಾನುವಾರ
ಸಂಜೆ 6-30 ರಿಂದ

ಆರತಕ್ಷತೆ :

Asst. Executive Engineer
Project Division
Yelahanka Zone
Bangalore

KNS

KNS CONVENTION CENTRE

(Unit Of Sri Nanjundeshwara Trust)
Kadiganahalli, Bettahalasur Post, Bangalore North
Ph : 28467744, 28467386

No. 478

RECEIPT

Asst. Executive Engineer
Project Division
Yelahanka Zone
Bangalore

Received with thanks from Shadian

a sum of Rs. 2,25,000/-

towards Two Lack Twenty Five thousand only

through Cash / Cheque / DD No. 100000/- *dated* 01-07-2019

drawn on Balance 1,25,000/- *Payable at* Vidyanagar-Cross

for **SRI NANJUNDESHWARA TRUST**

PAID